
ಡಾ. ಪ್ರೇಮಲತ ಬಿ.

# ಸಮಾನಾಂತರ ದಾರಿಗಳು



ಅವನು ತನ್ನ ಕೋಣೆಯಿಂದ ಹೊರಬಂದಿದ್ದ. ಆರಡಿ ಒಂದಿಂಚು ಎತ್ತರದ, ದೃಢಕಾಯದ ವ್ಯಕ್ತಿ. ಒಣಹುಲ್ಲಿನ ಬಣ್ಣದ ಕೂದಲು ಮತ್ತು ಹುಬ್ಬುಗಳು. ಮೀಸೆ ಗಡ್ಡಗಳನ್ನು ನಯವಾಗಿ ಬೋಳಿಸಿಕೊಂಡಿದ್ದ. ತಲೆಯ ಕೂದಲನ್ನು ನುಣ್ಣಗೆ ಕತ್ತರಿಸಿದ್ದ. ನಡಿಗೆಯಲ್ಲಿ ಲಾಸ್ಯವಿತ್ತು. ನನ್ನದೇ ವಯಸ್ಸಿರಬೇಕು.

ಹೊಸ ಆಸ್ಪತ್ರೆಗೆ ಕೆಲಸಕ್ಕೆ ಸೇರಿದ ಮೊದಲ ದಿನವದು. ಹೊಸ ಸಹೋದ್ಯೋಗಿಯನ್ನು ಮಾತಾಡಿಸುವಂತೆ ಹೇಳಿ ಮ್ಯಾನೇಜರ್ ಮಿಷೆಲ್ ಅವನನ್ನು ಕರೆದು ಪರಿಚಯಿಸಿದ್ದಳು.

“ಹಾಯ್'' ಎಂದು ಕೈ ಕುಲುಕಿದ್ದ. ನಂತರ ಒಂದೆರಡು ಮಾತನಾಡಿದ್ದ. ಧ್ವನಿಯಲ್ಲಿ ಆತಂಕವಿತ್ತೋ, ಅಳ್ಳುಕವಿತ್ತೋ ಅಂತೂ ಉದ್ವೇಗವಂತೂ ಡಣಾ ಢಾಳಾಗಿ ಕಂಡುಬರುತ್ತಿತ್ತು. ನನಗದು ಮೋಜೆನಿಸಿತ್ತು. ಅವನು ನನ್ನ ಕೈ ಕುಲುಕಿದಾಗ ಸ್ವಲ್ಪ ಭದ್ರವಾಗಿ ಹಿಡಿದು ಹಿಂಡಿದೆ. ನನ್ನ ಮುಖ ಮಾತ್ರ ಪ್ರಸನ್ನವಾಗಿತ್ತು. ಅವನ ಕಣ್ಣಲ್ಲಿ ಕಣ್ಣಿಟ್ಟು ಮಾತಾಡಿ ಅವನು ಚಡಪಡಿಸುವಂತೆ ಮಾಡಿದೆ.

ಅವನೇ ಆ ಆಸ್ಪತ್ರೆಯಲ್ಲಿ ದೊಡ್ಡ ವೈದ್ಯನಾಗಿದ್ದ. ಸಣ್ಣ ಊರಾದ ಕಾರಣ ಅವನಿಗಿಂತ